# ನಿಮ್ಮ ಆತ್ಮ ಸಾಕ್ಷಿಗೆ "ಸ್ವಾಗತ" ಎಂಬುದಾಗಿ ಹೇಳಿರಿ

ಯೇಸು ದೇವಾಲಯದಲ್ಲಿ ಉಪದೇಶ ಮಾಡುತ್ತಿದ್ದಾಗ, ವ್ಯಭಿಚಾರಿಣಿಯಾದ ಒಬ್ಬ ಸ್ತ್ರೀಯನ್ನು ಆತನ ಬಳಿಗೆ ಎಳತಂದರು. ಯೇಸುವನ್ನು ಮಾತಿನಲ್ಲಿ ಹಿಡಿಯುವದಕ್ಕಾಗಿ, "ಬೋಧಕನೇ, ಈ ಹೆಂಗಸು ವ್ಯಭಿಚಾರ ಮಾಡುತ್ತಿರುವಾಗಲೇ ಕೈಗೆ ಸಿಕ್ಕಿದಳು. ಇಂಥವರನ್ನು ಕಲ್ಲೆಸೆದು ಕೊಲ್ಲಬೇಕೆಂದು ಮೋಶೆಯು ಧರ್ಮಶಾಸ್ತ್ರದಲ್ಲಿ ನಮಗೆ ಅಪ್ಪಣೆ ಕೊಟ್ಟಿದ್ದಾನೆ; ಈಕೆಯ ವಿಷಯದಲ್ಲಿ ನೀನು ಏನು ಹೇಳುತ್ತಿ?" ಅಂದರು (ಯೋಹಾನ 8:4, 5). ಯೇಸು ಉತ್ತರಿಸಿ - ನಿಮ್ಮಲ್ಲಿ ಪಾಪವಿಲ್ಲದವನು ಯಾರೋ ಅವನೇ ಮೊದಲು ಆಕೆಯ ಮೇಲೆ ಕಲ್ಲನ್ನು ಹಾಕಲಿ ಅಂದನು (ವಚನ 7ಬಿ). ಅವರು ಯೇಸುವಿನ ಈ ಮಾತುಗಳನ್ನು ಕೇಳಿದಾಗ, ತಾವೇ ಪಾಪಿಗಳೆಂದು ಮನಸ್ಸಿನಲ್ಲಿ ತಿಳುಕೊಂಡು ಹಿರಿಯರು ಮೊದಲುಗೊಂಡು ಕಿರಿಯವರೆಗೂ ಒಬ್ಬರ ಹಿಂದೊಬ್ಬರು ಹೊರಗೆ ಹೋದರು (ವಚನ 9ಎ). ಅವರು ಏಕೆ ಹೊರಟು ಹೋದರು? KJVಯು ಒಂದು ವಿವರಣೆಯನ್ನು ಸೇರಿಸುತ್ತದೆ. "ಈ ಮಾತನ್ನು ಕೇಳಿದವರು, ತಮ್ಮ *ಆತ್ಮ ಸಾಕ್ಷಿಯಲ್ಲಿ ತಪಿತಸ್ಥರೆಂದು ಅರಿತುಕೊಂಡವರಾಗಿ,* ದೊಡ್ಡವರಿಂದ ಹಿಡಿದು ಚಿಕ್ಕವರವರೆಗೂ ಒಬ್ಬರ ನಂತರ ಒಬ್ಬರು ಹೊರಟುಹೋದರು." (ಒತ್ತಿ ಹೇಳಿದ್ದು ನನ್ನದು.)[1]

ಅವರ ಆತ್ಮದಲ್ಲಿ ತಪಿತಸ್ಥರೆಂದು ಅವರು ಅರಿತರು ಎಂಬ ಹೇಳಿಕೆಗೆ, ನಮ್ಮನ್ನು ಹೋಲಿಸಿ ನೋಡಬಹುದು. ನನ್ನ ಮಗಳಾದ ಆ್ಯಂಜಿ ಅವಳ ಕೆಲವು ತಪ್ಪುಗಳ ನಿಮಿತ್ತ ಅವಳಿಗೆ ನಿದ್ರೆಯು ಬಾರದೆ ಇರುವಾಗ, ಮುಧ್ಯರಾತ್ರಿಯ ಸಮಯಗಳಲ್ಲಿ ಎದ್ದು ನನ್ನೊಂದಿಗೆ ಆ ತಪ್ಪುಗಳನ್ನು ಅರಿಕೆ ಮಾಡುತ್ತಿದ್ದಳು. ಬಹಶಃ ನಾವುಗಳು ಸುಳ್ಳು ಹೇಳಿದ, ಪರೀಕ್ಷೆಯಲ್ಲಿ ಮೋಸಮಾಡಿದಂತಹ ನಮ್ಮದಲ್ಲದ್ದನ್ನು ದೋಚಿಕೊಂಡಾಗ, ಅಥವಾ ಇತರರಿಗೆ ವಿರುದ್ಧವಾದ ಕಾರ್ಯವನ್ನು ಮಾಡಿದ ನೆನಪುಗಳು ಮರುಕಳಿಸಿ "ನಮ್ಮ ಮನಸ್ಸಾಕ್ಷಿಗೆ" ಮನವರಿಕೆಯಾಗ ಬಹುದು.

ಮನಸ್ಸಾಕ್ಷಿಯ ಕುರಿತು, ಸತ್ಯವೇದವು ಅನೇಕ ಸಂಗತಿಗಳನ್ನು ತಿಳಿಸು ತ್ತವೆ. "ಆತ್ಮಸಾಕ್ಷಿ" ಎಂಬ ಪದವನ್ನು ಹಳೇ ಒಡಂಬಡಿಕೆಯಲ್ಲಿ ಹೆಚ್ಚಾಗಿ ಕಾಣುವದಿಲ್ಲ, [2] ಆದರೆ ಅದರ ಮುಖ್ಯ ಪ್ರಸ್ತಾಪವು ಅದರಲ್ಲಿ ಗೋಚರವಾಗಿದೆ - ಅದಾಮ ಹವ್ವಳು ದೇವರಿಗೆ ಅವಿಧೇಯರಾದಾಗ ಆತನಿಂದ ಅಡಗಿಕೊಂಡರು - ಈ ವಿಚಾರದಿಂದ ಈ ಪ್ರಸ್ತಾಪವು ಆರಂಭವಾಗುತ್ತದೆ (ಆದಿಕಾಂಡ 3:8). ಅನೇಕ ವರ್ಷಗಳ ನಂತರ, ಯೋಸೇಫನ ಸಹೋದರರು ಅವನನ್ನು ಗುಲಾಮತನಕ್ಕೆ ಮಾರಿದರು, ಇದರಿಂದ ಅವರ ಮನಸ್ಸು ಅವರನ್ನು ಯಾವಾಗಲೂ ಹಂಗಿಸುತ್ತಿತ್ತು (ಆದಿಕಾಂಡ 42:21). ದಾವೀದನು, ಸೌಲನ ನಿಲುವಂಗಿಯ ಮೂಲೆಯನ್ನು ಕತ್ತರಿಸಿದಾಗ, ದೇವರ ವಾಕ್ಯ ಹೇಳುವಂತೆ, "ಅವನ ಮನಸ್ಸಾಕ್ಷಿಯು ಅವನನ್ನು ಹಂಗಿಸತೊಡಗಿತು" (1 ಸಮುವೇಲ 24:5ಎ).

ಹೊಸ ಒಡಂಬಡಿಕೆಯಲ್ಲಿ "ಮನಸ್ಸಾಕ್ಷಿಯ" ಕುರಿತು ಗುರುತರವಾಗಿ ಕಾಣುತ್ತೇವೆ. ಹೊಸ ಒಡಂಬಡಿಕೆಯಲ್ಲಿ "ಮೂವತ್ತೆರಡು" ಸಾರಿ ತಿಳಿಸಲ್ಪಟ್ಟಿದೆ. ಅಧ್ಯಯನದಲ್ಲಿ ಇದಕ್ಕೆ ಸಂಬಂಧಿಸಿದ ಅನೇಕ ಪದಗಳನ್ನು ಬಳಸಲಾಗಿದೆ.[3] ಪೌಲನ ಬರವಣಿಗೆಯಲ್ಲಿಲಯೇ ಇಪ್ಪತ್ತೊಂದು ಸಾರಿ ಬರೆಯಲಾಗಿದೆ (ಇಬ್ರಿಯ ಪತ್ರಿಕೆಯನ್ನು ಅವನು ಬರೆದಿದ್ದೆಯಾದರೆ ಒಟ್ಟು ಇಪ್ಪತ್ತಾರು ಬಾರಿ).

ಮನಸ್ಸಾಕ್ಷಿಯ ಕುರಿತು ಸತ್ಯವೇದದಲ್ಲಿನ ಅಧ್ಯಯನವು ನಮಗೆ ಬಹು ಉತ್ತೇಜನ

ಕಾಲಿಯಾಗಿರುತ್ತದೆ. ಮನಸ್ಸಾಕ್ಷಿ ಎಂದರೇನು? ಎಂಬ ಪ್ರಶ್ನೆಯಿಂದ ಆರಂಭಿಸಬಹುದು.

## ಮನಸ್ಸಾಕ್ಷಿ ಎಂಬುದರ ಅರ್ಥ

ಯಾವುದು ಮನಸ್ಸಾಕ್ಷಿಯಲ್ಲ ಎಂಬುದನ್ನು ಮೊದಲಿಗೆ ತಿಳಿಯೋಣ.[4] ಧಾರ್ಮಿಕ ವಿಚಾರಗಳಲ್ಲಿ "ಮನಸ್ಸಾಕ್ಷಿಯು" ಸುರಕ್ಷತೆ ಮಾರ್ಗದರ್ಶನವನ್ನು ನೀಡುವದಿಲ್ಲ. ಪೌಲನು ಯೆಹೂದ್ಯರ ಹಿರಿಸಭೆಯ ಮುಂದೆ ನಿಂತಾಗ - ಸಹೋದರರೇ, "ನಾನು ಈ ದಿನದವರೆಗೂ ಒಳ್ಳೆ ಮನಸ್ಸಾಕ್ಷಿಯಿಂದ ದೇವರ ಮುಂದೆ ನಡೆದುಕೊಂಡಿದ್ದೇನೆ" (ಅಪೊಸ್ತಲರ ಕೃತ್ಯಗಳು 23:1ಬಿ). ಅಂದನು.

ಪೌಲನು ಕ್ರೈಸ್ತರನ್ನು ಹಿಂಸಿಸುವಾಗಲೂ ಕೂಡ ಅವನ ಮನಸ್ಸಾಕ್ಷಿ ಅವನಿಗೆ ಎಚ್ಚರಿಕೆ ನೀಡಿತ್ತು. "ಮನಸ್ಸಾಕ್ಷಿಯು" ಜ್ಞಾನ ಅಥವಾ ನಿಯಮವಾಗಿರುವದಿಲ್ಲ ಆದರೆ ಅದು ತನಗೆ ದೊರಕುವ ನಿಯಮ ಮತ್ತು ತಿಳುವಳಿಕೆಯನ್ನು ಬಳಸಿ ಕಾರ್ಯನಿರ್ವಹಿಸುತ್ತದೆ.

"ಮನಸ್ಸಾಕ್ಷಿ" ಅಂದರೆ ಮನುಷ್ಯನಲ್ಲಿರುವ ದೇವರ ಸ್ವರ ಆಗಿರುವದಿಲ್ಲ. ಕೆಲವಾರು ವರ್ಷಗಳ ಹಿಂದಿನ ಬರವಣಿಗೆಗಾರರಲ್ಲಿ ಇದು ಸಾಮಾನ್ಯವಾದ ಉಪಾಯವಾಗಿತ್ತು; ಅದನ್ನು ಅವರು ಕರ್ತನ "ಮಂದ ಮಾರುತ ಶಬ್ಧ" ಎಂದು ತಿಳಿದಿದ್ದರು (1 ಅರಸು 19:12; KJV). ಸತ್ಯವೇದದ ಪ್ರಕಾರ, ಮನಸ್ಸಾಕ್ಷಿಯು ದೇವರಿಂದ ದೊರೆತಿದ್ದು, ಅದನ್ನು ದೇವರೆ ಉಪಯೋಗಮಾಡಿ, ಮತ್ತು ಮನುಷ್ಯನನ್ನು ಪಾಪದಿಂದ ದೂರವಿಡುವ ದೇವರ ಯೋಜನೆಯಾಗಿರುವದರಿಂದ, ಅದು ಮನುಷ್ಯನ ಸ್ವಂತ ಸ್ವರವಾಗಿರುತ್ತದೆ.

### ಅದು ಸತ್ಯವಾಗಿರುತ್ತದೆ

ಅದರ ಸತ್ಯಾಂಶವನ್ನು ನಾವು ಯೋಚಿಸುವಾಗ, "ಮನಸ್ಸಾಕ್ಷಿ" ಎಂದರೇನು?

ಮೊದಲನೆಯದಾಗಿ ಮನಸ್ಸಾಕ್ಷಿಯು ನಿಜವಾಗಿಯೂ ಇರುವಂಥ ಸಂಗತಿ ಯಾಗಿರುತ್ತದೆಂದು ನಾನು ಒತ್ತಿ ಹೇಳುತ್ತೇನೆ. ಕೆಲವರು ಮನಸ್ಸಾಕ್ಷಿಯ ಇರುವಿಕೆಯನ್ನು ತೆಗಳುತ್ತಾರೆ. ನಾಸ್ತಿಕರು ಹಾಗೂ ಅನೀಶ್ವರವಾದಿ ಪಂಡಿತರು ಮನಸ್ಸಾಕ್ಷಿಯ ಇರುವಿಕೆಯನ್ನು ಅಲ್ಲಗಳೆಯುತ್ತಾರೆ. ಕಾರಣವೇನೆಂದರೆ ಅದು ಆತ್ಮೀಕ ಪ್ರಪಂಚದಲ್ಲಿ ದೇವರ ಇರುವಿಕೆಯನ್ನು ನಿರೂಪಿಸುತ್ತದೆ. (ಥಾಮಸ್ ವಾರನ್ ನಾಸ್ತಿಕನಾದ ಅಂತೋನಿಫಿನ ಬಗ್ಗೆ ಚರ್ಚಿಸುವಾಗ, ಮನುಷ್ಯರ ಕ್ರಿಯೆಗಳಲ್ಲಿ ಕೆಲವು ಸರಿಯಾಗಿಯೂ, ಕೆಲವು ತಪ್ಪಾಗಿಯೂ ಇರುತ್ತವೆ ಎಂದು ಗಮನಿಸಿರುವರು. ಅದಕ್ಕೆ ದೃಷ್ಟಾಂತವಾಗಿ, ಯೆಹೂದ್ಯರಲ್ಲಿ ಹಿಟ್ಲರನು ತೋರಿದ ಭಯಾನಕ ಕೃತ್ಯಗಳನ್ನು ಖಂಡಿಸಿರುವನು. ಈ ವಿಧವಾದ ದೇವರ ಪರವಾದ ಸಾರ್ವತ್ರಿಕದ ನೈತಿಕವಾದ ಮನಸ್ಸಾಕ್ಷಿಯನ್ನು ನಮ್ಮೊಳಗೆ ಯಾರು ಇಟ್ಟಿರುವರು ಎಂಬುದರ ಬಗ್ಗೆ ತರ್ಕಮಾಡಿರುವನು.[5])

ಮಾನುಷ ಸ್ವಭಾವದ ಮಾನಸಿಕ ತಜ್ಞರು ಸಹ ಮನಸ್ಸಾಕ್ಷಿಯ ಸತ್ಯಾಂಶವನ್ನು ಅಲ್ಲಗಳೆ ಯುತ್ತಾರೆ - ಯಾಕಂದರೆ ಕೆಲವು ಕಾರ್ಯಗಳು ಸರಿಯೆಂದು, ಇನ್ನು ಕೆಲವು ಸರಿಯಲ್ಲವೆಂದು ಮನಸ್ಸಾಕ್ಷಿಯು ತಿಳಿಸುತ್ತದೆ. ಪಾಪವು ನಿಜವಾದದ್ದು, ಮತ್ತು ಅದಕ್ಕೆ ತಕ್ಕ ಶಾಸ್ತಿಯಾಗ ಬೇಕೆಂದು ಮನಸ್ಸಾಕ್ಷಿಯು ತಿಳಿಸುವಾಗ - ಅದನ್ನು ತಿರಸ್ಕಾರ ಮಾಡುವದಾಗಲೀ ಅಥವಾ ಅಲಕ್ಷ ಮಾಡುವದಾಗಲೀ ಸಲ್ಲ.

ಇನ್ನು ಕೆಲವರು ಮನಸ್ಸಾಕ್ಷಿಯ ಇರುವಿಕೆಯನ್ನು ನಂಬುವದಾದರು, ಅದಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಬಾರದೆಂದು ತಿಳಿದಿರುತ್ತಾರೆ. ಮನಸ್ಸಾಕ್ಷಿಯು ನಮ್ಮ ಹಿಂದೆ ಬರುತ್ತದೆ: ಅದು ಯುಗಗಳಿಂದ ಮುಂದುವರಿದ ಹುಚ್ಚುತನ ಎನ್ನುತ್ತಾರೆ. ಇನ್ನು ಕೆಲವರು ಅದು ನಮ್ಮ ಸುತ್ತಲಿಂದ ಬರುತ್ತದೆ ಎನ್ನುತ್ತಾರೆ: ಸಮಾಜವು ಹೇಳುವಂಥದ್ದೇ ತಪ್ಪು ಮತ್ತು ಸರಿಯಾದ ಸಂಗತಿ ಎನ್ನುತ್ತಾರೆ, ಮತ್ತು ಕೆಲವರು ನಮ್ಮೊಳಗಿಂದ ಬರುತ್ತದೆ ಎನ್ನುತ್ತಾರೆ: ನಾವು ಮಾಡುವಂಥ

ಸಕಲ ಕ್ರಿಯೆಗಳಿಗಿರುವ ಪ್ರತಿಕ್ರಿಯೆ ಎಂಬದೆ. (ಈ ಎಲ್ಲಾ ವಿಚಾರಗಳು ಸರಿಯಾದ ಹಾಗೂ ತಪ್ಪಾದ ತಿಳುವಳಿಕೆಯಿಂದ ಬರುತ್ತದೆ, ಆದರೆ ಮನಸ್ಸಾಕ್ಷಿಯ ಮೂಲವನ್ನು ತಿಳಿಸುವದಿಲ್ಲ.)

ಕಲಿತವರು ಹಾಗೂ ಇದರ ಕುರಿತಾಗಿ ಏನನ್ನಾದರು ಹೇಳಲಿ (1 ಕೊರಿಂಥ 1:21), ಅನುಭವ ಹಾಗೂ ಸತ್ಯವೇದದ ಪ್ರಕಾರ, ಮನಸ್ಸಾಕ್ಷಿಯು ನಿಜವಾಗಿದ್ದು, ಅದು ದೇವರಿಂದಲೇ ಬಂದದ್ದು ಎಂದು ತಿಳಿಸುತ್ತದೆ. ಅದು ನಮ್ಮ ಹಿಂದಿನಿಂದಾಗಲೀ ಹೊರಗಿನಿಂದಾಗಲೀ, ನಮ್ಮೊಳಗಿಂದಾಗಲೀ ಬಾರದೇ ಅದು ಮೇಲಿನಿಂದಲೇ ಬಂದದ್ದಾಗಿರುತ್ತದೆ! ದೇವರು ನಮ್ಮನ್ನು ತನ್ನ ಸಾರೂಪ್ಯಕ್ಕೆ ನಿರ್ಮಿಸಿರುವದರಿಂದ, ಅದು ಮನಸ್ಸಾಕ್ಷಿಯ ಮೂಲ ಭಾಗವಾಗಿರುತ್ತದೆ (ಆದಿಕಾಂಡ 1:27). ಪ್ರತಿಯೊಬ್ಬರಿಗೂ ಮನಸ್ಸಾಕ್ಷಿಯನ್ನು ನೀಡಲಾಗಿದೆ (ರೋಮಾಪುರ 2:13-15); ಅದು ಸಾರ್ವತ್ರಿಕ ಸತ್ಯವಾಗಿರುತ್ತದೆ.[6] ಸಂದೇಹವಾದಿಯಾಗಿರುವ ಬೆರ್ನಾಡ್ ಷಾ, ಹೇಳಿರುವಂತೆ, ಮನಸ್ಸಾಕ್ಷಿಯು ಸಾಮಾನ್ಯ ಮನಷ್ಯನ ಒಂದು ಭಾಗವಾಗಿದ್ದು, "ಅದು ತನ್ನ ಕಾರ್ಯದಲ್ಲಿ ಬಿದ್ದು ಹೋಗುವದಿಲ್ಲ." ಇನ್ನೊಬ್ಬನು ಹೇಳಿದಂತೆ, "ಯಥಾರ್ಥವಾದ ಯಾವುದೇ ವ್ಯಕ್ತಿಯು ಮನಸ್ಸಾಕ್ಷಿಯ ಇರುವಿಕೆಯನ್ನು ತನ್ನ ಮನಸ್ಸಿನಿಂದ ನಿರಾಕರಿಸಲಾರನು."

**ಇದು "ನೈತಿಕವಾದ ಮನಸ್ಸಾಕ್ಷಿ"**

ಮನಸ್ಸಾಕ್ಷಿಯ ಇರುವಿಕೆಯನ್ನು ನಾವುಗಳು ಒಪ್ಪಿಕೊಂಡರೂ, ಅದು ದೇಹದ ಇತರೆ ಭಾಗಗಳಲ್ಲಿ ಹೊಂದಿರುವ ಸಂಬಂಧವನ್ನು ವಿವರಿಸುವದು ಕಷ್ಟಕರವಾಗುತ್ತದೆ ಮನಸ್ಸು (ಬುದ್ಧಿ) ಮತ್ತು ಬುದ್ಧಿ ಒಂದಾಗಿರುತ್ತದೆ ತೀತ 1:15 ಸಂಕಲ್ಪ ಹಾಗೂ ಮನಸ್ಸಾಕ್ಷಿ ಸಂಬಂಧ ಹೊಂದಿರುತ್ತದೆ (ಅಪೊಸ್ತಲರ ಕೃತ್ಯಗಳು 23:1 ಮತ್ತು 26:9ನ್ನು ಹೋಲಿಸಿ). ಮುಖ್ಯವಾಗಿ ಹೃದಯ ಹಾಗೂ ಮನಸ್ಸಾಕ್ಷಿ ಒಂದಾಗಿರುತ್ತದೆ. NASB ಯಲ್ಲಿ "ದಾವೀದನ ಮನಸ್ಸು ಅವನನ್ನು ಹಂಗಿಸತೊಡಗಿತು" (1 ಸಮುವೇಲ 24:5) ಎಂದು ತಿಳಿಸುತ್ತದೆ, ಆದರೆ ಇಬ್ರಿಯ ಮೂಲ ಭಾಷೆಯಲ್ಲಿ "ದಾವೀದನ ಹೃದಯ ಕಳವಳಗೊಂಡಿತು" ಎಂದಿರುತ್ತದೆ (ನೋಡಿರಿ KJV) ಪಂಚಾಶತ್ತಮ ದಿನದಂದು ಪೇತ್ರನ ಸಂದೇಶವು ಜನರ ಮನಸ್ಸಾಕ್ಷಿಯನ್ನು ತಟ್ಟಿದವು, ಆ ವಾಕ್ಯದಂತೆ, "ಅವರ *ಹೃದಯದಲ್ಲಿ* ಅಲಗು ನೆಟ್ಟಂತಾಯಿತು" (ಅಪೊಸ್ತಲರ ಕೃತ್ಯಗಳು 2:37ಬಿ). ಹಾಗೂ ಪೌಲನು ಮನಸ್ಸಾಕ್ಷಿಯನ್ನು ಬದಿಗಿರಿಸಿ, ಅದರ ವಿಶೇಷವಾದ ಕ್ರಿಯೆಯ ಬಗ್ಗೆ ಮಾತನಾಡಿದನು. ಆದ್ದರಿಂದ, "ಮನಸ್ಸಾಕ್ಷಿ ಎಂದರೇನು ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಬೇಕು?"

ಮನಸ್ಸಾಕ್ಷಿಯ ಕುರಿತು ಅನೇಕರು ಗೊಂದಲಕ್ಕೊಳಗಾಗಿದ್ದಾರೆ. ಒಬ್ಬನು ತಿಳಿಸಿದಂತೆ, "ಎಲ್ಲವು ಸರಿಯಾಗಿರುವಂಥ ಸಮಯದಲ್ಲಿ, ಅದು ತಾಪಪಡುತ್ತದೆ." ಇನ್ನೊಬ್ಬನು ಹೇಳಿದಂತೆ "ತೆರಿಗೆಯನ್ನು ನೀಡು ಎಂದು ಹೇಳುವ ಕಂದಾಯ ಕಛೇರಿಯ ಸೇವೆಯಾಗಿರುತ್ತದೆ." ಎಂದು ಹೇಳುವ ಈ ವಿಚಾರದ ಸಣ್ಣ ಸ್ವರ. ಒಬ್ಬ ಚಿಕ್ಕ ಬಾಲಕನು ಹೇಳಿದಂತೆ: "ನಿನ್ನ ತಪ್ಪನ್ನು ನಿನ್ನ ತಂಗಿಯು ಹೇಳುವ ಮೊದಲು, ನೀನು ನಿನ್ನ ತಾಯಿಯ ಬಳಿ ಅದನ್ನು ಅರಿಕೆ ಮಾಡು" ಎಂಬದೇ. ಒಂದು ಮನರಂಜನೆಯ ಮೇಜಿನ ಹಾಗೆ, "ಇದು, ನೀನು ತಪ್ಪು ಮಾಡದಂತೆ ಸಹಾಯಿಸದಿದ್ದರೂ, ಅದನ್ನು ಆನಂದಿಸದಂತೆ ಕಾಪಾಡುತ್ತದೆ." ಮನಸ್ಸಾಕ್ಷಿಯ ಬಗ್ಗೆ ಹಕ್ಕಲ್ ಬರಿ ಫಿನ್[7] "ಒಬ್ಬನ ಪೂರ್ಣ ದೇಹವನ್ನು ಕೊಠಡಿಯೊಳಗೆ ಇಡುವಂಥ ಕ್ರಿಯೆಗಿಂತಲೂ, ಇದಕ್ಕೆ ಹೆಚ್ಚಿನ ಸ್ಥಳಾವಕಾಶವನ್ನು ಪಡೆದುಕೊಳ್ಳುತ್ತದೆ" ಎಂದು ಹೇಳಿರುವರು.

"ಮನಸ್ಸಾಕ್ಷಿ" ಎಂಬುದಕ್ಕೆ ಹೊಸ ಒಡಂಬಡಿಕೆಯ ಸಮಯದಲ್ಲಿ ಗ್ರೀಕ್ ಭಾಷೆಯ ಸಾಮಾನ್ಯ ಪದವನ್ನು ಬಳಸಲಾಗಿದೆ; ಅದನ್ನು ಜನರ ಭಾಷೆಗನುಸಾರವಾಗಿ ಬಳಸಲಾಗಿದೆ ವಿನಃ ಪಂಡಿತರ ಅಥವ ನಿಯಮದ ಅನುಸಾರವಾಗಿ ಬಳಸಲಾಗಿರು ವದಿಲ್ಲ. ಗ್ರೀಕರು ಈ ಶಬ್ಧವನ್ನು ತಮ್ಮ ಧೈನಂದಿನ ಭಾಷೆಯಲ್ಲಿ ಬಳಸಿರುವರು. ಅದರ ಅರ್ಥವೇನೆಂದರೆ, "ನೀನು ತಪ್ಪು ಮಾಡುವಾಗ, ಅದರ ವೇದನೆಯನ್ನು ಅನುಭವಿಸುತ್ತಿ" ಪೌಲನು ಈ ಸರಳವಾದ ಪದ

ಬಳಕೆಯನ್ನು ಆತ್ಮನ ಪ್ರೇರಣೆಯ ಸಹಾಯದಿಂದ, ಹೊಸ ಒಡಂಬಡಿಕೆಯಲ್ಲಿ "ವಿಶೇಷ ಪದವನ್ನಾಗಿ ಬಳಸಿರುವನು."

"ಮನಸ್ಸಾಕ್ಷಿ" ಎಂಬುದು ಗ್ರೀಕ್‌ನ "ಸುನೈಡೇಸಿಸ್" ಎಂಬ ಜೋಡಿಪದವಾಗಿದೆ, ಅಂದರೆ "ಜೊತೆಯಲ್ಲಿ" ಅಥವ "ಒಟ್ಟಾಗಿ" (*ಸನ್*) ಅದರ ಸಂಗಡ "ತಿಳಿ" (*ಅಯೋಡ*) ಎಂಬ ಪದವಾಗಿದೆ, ಆಂಗ್ಲ ಭಾಷೆಯ "ಕಾನ್ಶಿಯನ್ಸ್" ಎಂಬ ಪದದಲ್ಲೂ ಇದೇ ಅರ್ಥವನ್ನು ಗಮನಿಸುತ್ತೇವೆ; ಇದು ಲ್ಯಾಟೀನ್ ಭಾಷೆಯ, "ಕಾನ್" (ಜೊತೆ ಅಥವಾ ಒಟ್ಟಾಗಿ) ಮತ್ತು "ಶಿಯನ್ಸ್" (ತಿಳಿಯಲು). ಇಂಗ್ಲೀಷ್ ಹಾಗೂ ಗ್ರೀಕ್ ಭಾಷೆಯಲ್ಲಿ "ತಿಳಿಯುವದರೊಂದಿಗೆ ಅಥವಾ ಒಟ್ಟಾಗಿ" ಎಂಬ ಒಂದೇ ಅರ್ಥವಾಗಿದೆ. "ನಮ್ಮನ್ನು ನಾವೇ ಅರಿಯುವದು ಹಾಗೂ ನಮ್ಮೊಳಗಿರುವದನ್ನು ಅರಿಯುವದು" ಎಂಬ ಸಾಮರ್ಥ್ಯದ ಪದವಾಗಿದೆ;[8] ಅದು ನಮ್ಮ ಅಂತರ್ಯವನ್ನು ತಿಳಿಯುವಾಗ, ನಮ್ಮನ್ನು ನಾವೇ ಅರಿಯುವವೆಂಬ ಅರ್ಥವಾಗಿದೆ.

ಅವರ ಲೆಕ್ಸಿಕನ್ ಗ್ರಂಥದಲ್ಲಿ, ಅರೆಂಜ್ ಮತ್ತು ಗಿಂಗ್ರಿಜ್‌ರವರು "ಸುನೆಡೇಸಸ್" ಎಂಬ ಪದವನ್ನು "ನೈತಿಕವಾದ ಮನಸ್ಸಾಕ್ಷಿ" ಎಂದು ಬಣ್ಣಿಸಿರುವರು.[9] ತಯರ್‌ರವರ ಲೆಕ್ಸಿಕನ್‌ನಲ್ಲಿ ವಿಸ್ತಾರವಾದ ವಿವರಣೆಯನ್ನು ನೀಡಲಾಗಿದೆ:[10] "ನೈತಿಕವಾದ ಒಳ್ಳೆಯ ಮತ್ತು ಕೆಟ್ಟದ್ದರ ನಡುವೆ, ಆತ್ಮವು ವಿಭಜನೆಯನ್ನು ಕೆಟ್ಟದ್ದನ್ನು ತ್ಯಜಿಸಿ ಒಳ್ಳೆಯದನ್ನು ಮಾಡುವ ಕೆಲಸವನ್ನು ಮಾಡುತ್ತದೆ, ಮತ್ತು ಒಂದನ್ನು ತ್ಯಜಿಸಲು, ಇನ್ನೊಂದನ್ನು ಅಂಗೀಕರಿಸಲು ಪ್ರೇರಿಸುತ್ತದೆ."[11]

"ನೈತಿಕ ಮನಸ್ಸಾಕ್ಷಿ" ವಿವರಣೆಗೆ ಅರೆಂಡ್ಟ್ ಮತ್ತು ಗಿಂಗ್ರಿಚ್‌ರವರು ಸಮೀಪವಾಗಿದ್ದಾರೆ. "ಮನಸ್ಸಾಕ್ಷಿಯ" ಕುರಿತು ಅರ್ಥ ಮಾಡಿಕೊಳ್ಳಬೇಕಿದ್ದರೆ, ತಯರ್ ಮತ್ತು ವೈನ್‌ರ ಪ್ರಕಾರ: ಅದರ ಕಾರ್ಯ ಸಾಧನೆಯನ್ನು ಗಮನಿಸಿ, ಒಪ್ಪಿಕೊಳ್ಳ ಬೇಕಾಗುತ್ತದೆ.

## ವಿವರಣೆಗೊಂಡ ಮನಸ್ಸಾಕ್ಷಿ

ಸತ್ಯವೇದದ ಪ್ರಕಾರ, "ಮನಸ್ಸಾಕ್ಷಿಯು" ಎರಡು ಪ್ರಮುಖ ಕಾರ್ಯಗಳನ್ನು ಹಾಗೂ ಎರಡನೇ ದರ್ಜೆಯ ಒಂದು ಕಾರ್ಯವನ್ನು ನಿರ್ವಹಿಸುತ್ತದೆ. ಈ ಕಾರ್ಯ ವಿಧಾನಗಳ ಬಗ್ಗೆ, ಮನಸ್ಸಾಕ್ಷಿಯನ್ನು ಮಾನವನ ಧೈಹಿಕ ನರಮಂಡಲದ ವ್ಯವಸ್ಥೆಗೆ ಹೋಲಿಸಬಹುದು. ಆತ್ಮದ ವ್ಯವಸ್ಥೆಗೆ ಮನಸ್ಸಾಕ್ಷಿಯು ಇರುವಂತೆ, ನರಮಂಡಲದ ವ್ಯವಸ್ಥೆಯು ದೇಹಕ್ಕೆ ಸಂಬಂಧಪಟ್ಟಿರುತ್ತದೆ. ನರಮಂಡಲದ ಪ್ರಾಥಮಿಕವಾದ ಉದ್ದೇಶದ ಬಗ್ಗೆ ಆಲೋಚಿಸಿರಿ: ಅದು ದೇಹಕ್ಕೆ ಉಂಟಾಗುವ ಅಪಾಯದ ಮುನ್ಸೂಚನೆಯನ್ನು ನೀಡುತ್ತದೆ (ಉದಾಹರಣೆ: "ಅದು ಬಿಸಿಯಾಗಿದೆ!") ದೇಹವು ಈ ಸೂಚನೆಯನ್ನು ನಿರಾಕರಿಸಿದರೆ, ದೇಹಕ್ಕೆ ಶಿಕ್ಷೆಯುಂಟಾಗುತ್ತದೆ ("ಅದು ವೇದನೆಯೇ!"). ಅದರ ಎರಡನೆಯ ಉದ್ದೇಶದ ಕುರಿತು, ಅದು ಇತರರಿಗೆ ಉಂಟಾಗಬಹುದಾದ, ಅಪಾಯದ ಕುರಿತು ಮುನ್ಸೂಚನೆಯನ್ನು ನೀಡುತ್ತದೆ ("ಮಕ್ಕಳೇ ಬೆಂಕಿಯಿಂದ ದೂರವಿರ್ರಿ, ಇಲ್ಲದೆ ಹೋದರೆ ನೀವು ಸುಟ್ಟು ಕೊಳ್ಳುವಿರಿ!"). ಮನಸ್ಸಾಕ್ಷಿಯು ಸಹ ಇದೇ ವಿಧಾನವನ್ನು ಹೊಂದಿರುತ್ತದೆ.

### ಅದು ವ್ಯತ್ಯಾಸಗಳನ್ನು ವಿಭಜನೆ ಮಾಡಿ, ಮಾರ್ಗದರ್ಶನ ನೀಡುತ್ತದೆ

ಯಾವುದು ಸರಿ ಯಾವುದು ತಪ್ಪು ಎಂದು ನಮಗೆ ತಿಳಿಸುವದೇ ಮನಸ್ಸಾಕ್ಷಿಯ ಪ್ರಾಥಮಿಕ ಕೆಲಸವಾಗಿರುತ್ತದೆ, ಮತ್ತು ಸರಿಯಾದದ್ದನ್ನು ಮಾಡು ಎಂದು ಹೇಳುತ್ತದೆ. ಇಬ್ರಿಯ 5:14ರಲ್ಲಿ, "ಇದು ಒಳ್ಳೆದು ಮತ್ತು ಕೆಟ್ಟದ್ದು" ಎಂಬುದನ್ನು ತಿಳಿಸುವದು ಮನಸ್ಸಾಕ್ಷಿಯ ಕೆಲಸ ವಾಗಿರುತ್ತದೆ. ರೋಮಾಪುರ 2:13-15ಎ ರಲ್ಲಿ ಉತ್ತಮವಾದ ಚರ್ಚೆಯನ್ನು ನೋಡುತ್ತೇವೆ.

> ಧರ್ಮಶಾಸ್ತ್ರ ಕೇಳಿದ ಮಾತ್ರದಿಂದಲೇ ಯಾರೂ ದೇವರ ಸನ್ನಿಧಿಯಲ್ಲಿ ನೀತಿವಂತರಾಗುವದಿಲ್ಲ; ಅದನ್ನು ಅನುಸರಿಸುವವರೇ ನೀತಿವಂತರೆಂದು

ನಿರ್ಣಯಿಸಲ್ಪಡುವರು. ಧರ್ಮಶಾಸ್ತ್ರವಿಲ್ಲದ ಅನ್ಯಜನರು ಸ್ವಾಭಾವಿಕವಾಗಿ ಧರ್ಮಶಾಸ್ತ್ರದಲ್ಲಿ ಹೇಳಿದಂತೆ ನಡೆದರೆ ಅವರು ಧರ್ಮಶಾಸ್ತ್ರವಿಲ್ಲದವರಾ ಗಿದ್ದರೂ ತಾವೇ ತಮಗೆ ಧರ್ಮ ಪ್ರಮಾಣವಾಗಿದ್ದಾರೆ; ಹೇಗಂದರೆ ಅವರು ಧರ್ಮಶಾಸ್ತ್ರದ ಮುಖ್ಯ ತಾತ್ಪರ್ಯ ತಮ್ಮ ಹೃದಯದಲ್ಲಿ ಬರೆದದೆ ಎಂಬದನ್ನು ತೋರ್ಪಡಿಸುತ್ತಾರೆ. ಇದಕ್ಕೆ ಅವರ ಮನಸ್ಸು ಸಹ ಸಾಕ್ಷಿ ನುಡಿಯುತ್ತದೆ; ಅವರ ಯೋಚನೆಗಳು ವಾದಿಪ್ರತಿ ವಾದಿಗಳಂತೆ - ಇದು ತಪ್ಪೆಂದು ತಪ್ಪಲ್ಲವೆಂದು ಸೂಚಿಸುತ್ತವೆ.[12]

ಕೆಲವು ಕ್ರಿಯೆಗಳು ಒಳ್ಳೆಯವು, ಕೆಲವು ತಪ್ಪಾದದ್ದು ಎಂದು ಪ್ರತಿಯೊಬ್ಬರು ತಿಳಿದು ಕೊಂಡಿದ್ದಾರೆ - ದೇವರ ನಿಯಮಗಳನ್ನು ಅರಿಯದವರು ಸಹ ಇದರಲ್ಲಿ ಒಳಗೊಂಡಿರುವರು. ಉದಾಹರಣೆಗಾಗಿ; ಕಳ್ಳತನ ಮತ್ತು ಕೊಲೆಯ ಬಗ್ಗೆ ಪ್ರತಿಯೊಂದು ಸಮುದಾಯದಲ್ಲೂ ತಮ್ಮದೇ ಆದ ಕಾನೂನನ್ನು ಹೊಂದಿರುತ್ತಾರೆ. ಈ ನೈತಿಕವಾದ ನಿರ್ಣಯವನ್ನು ಕೈಗೊಳ್ಳುವಂತೆ, ಯಾವ ಶಕ್ತಿಯು ಇವರಿಗೆ ಪ್ರೇರಣೆ ನೀಡುತ್ತದೆ? ವಾಕ್ಯಭಾಗವು ಮುಂದುವರಿಸಿ, "ಇದಕ್ಕೆ ಇವರ *ಮನಸ್ಸು ಸಹ ಸಾಕ್ಷಿ* ನೀಡುತ್ತದೆ" (ವಚನ 15ಬಿ; ಒತ್ತಿ ಹೇಳಿದ್ದು ನನ್ನದು). ಅವರ ಯೋಜನೆಗಳು ವಾದಿ ಪ್ರತಿವಾದಿಗಳಂತೆ - ಇದು ತಪ್ಪೆಂದು, ತಪ್ಪಲ್ಲವೆಂದು ಸೂಚಿಸುತ್ತದೆ. ಇದು ಮನಸ್ಸಾಕ್ಷಿಯ ಪ್ರಥಮ ಕಾರ್ಯವಾಗಿರುತ್ತದೆ. "ನಾನು ನನ್ನ ಮನಸ್ಸಾಕ್ಷಿಯಿಂದ ಅದನ್ನು ಮಾಡಲಾರೆ" ಎಂಬ ತತ್ವವನ್ನು ಈ ಅಂಶವು ನಿರೂಪಿಸುತ್ತದೆ.

**ಅದು ನ್ಯಾಯ ನಿರ್ಣಯವನ್ನು ಮಾಡಿ, ಅದನ್ನು ಕಾರ್ಯರೂಪಕ್ಕೆ ತರುತ್ತದೆ**

"ಮನಸ್ಸಾಕ್ಷಿಯು" ನೀಡುವ ಸೂಚನೆಯನ್ನು ಉಲ್ಲಂಘನೆ ಮಾಡುವಾಗ, ಅಥವಾ ಅದು ಹೇಳುವದನ್ನು ಮಾಡದೆ ಇರುವಾಗ, ಅದು ಅದರ ಕುರಿತು ನ್ಯಾಯ ನಿರ್ಣಯವನ್ನು ಕಾರ್ಯರೂಪಕ್ಕೆ ತರುತ್ತದೆ. ಮನಸ್ಸಾಕ್ಷಿಯು ಹೇಳುವಂಥದ್ದನ್ನು ನಾವು ಮಾಡಲೇಬೇ ಕೆಂದು ನಮ್ಮನ್ನು ಅದು ಒತ್ತಾಯಪಡಿಸುವದಿಲ್ಲ, ಆದರೆ ನಮ್ಮ ವಿಧೇಯತೆಗನುಗುಣವಾಗಿ ಅದು ನಮ್ಮನ್ನು ಆಶೀರ್ವದಿಸುತ್ತದೆ, ಅಥವಾ ಅವಿಧೇಯತೆಗೆ ತಕ್ಕ ಶಿಕ್ಷೆಯನ್ನು ನೀಡುತ್ತದೆ. ಅದು ನ್ಯಾಯ ನಿರ್ಣಯದಲ್ಲಿ, ತೀರ್ಪು ನೀಡುವ ಸಾಕ್ಷಿ ಹೇಳುವ, ಕಾರ್ಯವನ್ನು ಒಂದೇ ನಿರ್ವಹಿಸುತ್ತದೆ. ಅದು ನ್ಯಾಯಲಯದ ಮರಣ ತೀರ್ಪನ್ನು ನೀಡುವಂಥ ಆದೇಶವನ್ನು ಸಹ ಪಾಲಿಸುತ್ತದೆ. ಆದ್ದರಿಂದ ಪೌಲನು ಅನ್ಯರ ಕುರಿತಾಗಿ ಮಾತನಾಡುವಾಗ, "ಅವರ ಯೋಜನೆಗಳು ವಾದಿ ಪ್ರತಿವಾದಿಗಳಂತೆ - ಇದು ತಪ್ಪೆಂದು ತಪ್ಪೆಲ್ಲವೆಂದು ಸೂಚಿಸುತ್ತದೆ" (ರೋಮಾಪುರ 2:15ಸಿ) ಎಂದು ಬರೆದಿರುವನು.

"ನೀನು ಸರಿಯಾದದ್ದನ್ನೆ ಮಾಡಿರುವಿ" ಎಂಬ ಆಲೋಚನೆಯೇ, ನಿನ್ನ ಪರವಾದ ವಾದಿಯಾಗಿರುತ್ತದೆ (ರೋಮಾಪುರ 9:1). ಅದು ನಿನಗೆ ವಿಶೇಷವಾದ ಆಶೀರ್ವಾದವಾಗಿರುತ್ತದೆ ಸತ್ಯವೇದವು ಇದನ್ನು "ಒಳ್ಳೆಯ ಮನಸ್ಸಾಕ್ಷಿ" ಎಂದು ಕರೆಯುತ್ತದೆ (ಅಪೊಸ್ತಲರ ಕೃತ್ಯಗಳು 23:1; 1 ತಿಮೊಥೆ 1:5, 19; 1 ಪೇತ್ರ 3:16, 21; ಇಬ್ರಿಯ 13:18).[13] ಅದು "ನಿರ್ದೋಷದ" (ಅಪೊಸ್ತಲರ ಕೃತ್ಯಗಳು 24:16) ಹಾಗೂ ನಿಷ್ಕಲ್ಮಷ ವಾದ ಮನಸ್ಸಾಕ್ಷಿಯಾಗಿರುತ್ತದೆ (1 ತಿಮೊಥೆ 3:9; 2 ತಿಮೊಥೆ 1:3), [14] ಫ್ರೆಂಚ್‌ರವರ ನಾಣ್ಣುಡಿಯಂತೆ: ಒಳ್ಳೆಯ ಮನಸ್ಸಾಕ್ಷಿಯು, ಒಂದು ತಲೆದಿಂಬಿನ ಹಾಗೆ; ಮನಸಾಕ್ಷಿಯನ್ನು ಒಬ್ಬರು "ಪರಲೋಕದ ಒಂದು ರುಚಿ" ಎಂದಿರುವರು.

ಒಳ್ಳೆಯ ಮನಸ್ಸಾಕ್ಷಿಯ ನಿಮಿತ್ತ ಪೌಲನು ಭರವಸೆಯಿಂದ ಮುಂದೆ ಸಾಗಿದನು. ಅವನು ಕೊರಿಂಥದವರಿಗೆ ಬರೆಯುವಾಗ, "ದೇವರ ಕೃಪೆಯನ್ನು ಆಶ್ರಯಿಸಿ ಆತನಿಂದಾಗುವ ಪವಿತ್ರಾತ್ಮವು ನಿಷ್ಕಪಟತ್ವವು ಉಳ್ಳವರಾಗಿ ... ನಡೆಕೊಂಡೆವೆಂದು ನಮ್ಮ ಮನಸ್ಸು ನಮಗೆ ಸಾಕ್ಷಿ ಹೇಳುತ್ತದೆ ..." ಅಂದನು (2 ಕೊರಿಂಥ 1:12). ತಾನು ಮಾಡುವಂಥದ್ದು

ಸರಿಯಾದದ್ದೇ ಎಂದು ಮನುಷ್ಯನು ನಿರ್ಧರಿಸಲು ಸಾಧ್ಯವಿದೆ. ಹಿಂಸೆಗೊಳಗಾದ ಕ್ರೈಸ್ತರಿಗೆ ಪೇತ್ರನು, ಒಳ್ಳೆ ಮನಸ್ಸಾಕ್ಷಿಯುಳ್ಳವರಾಗಿರಿ: "ಆಗ ಕ್ರಿಸ್ತನಲ್ಲಿರುವ ನಿಮ್ಮ ಒಳ್ಳೆ ನಡವಳಿಕೆಯನ್ನು ಕುರಿತು ಬೈಯ್ಯುವವರು ನಿಮ್ಮನ್ನು ನಿಂದಿಸುವದಕ್ಕೆ ನಾಚಿಕೆ ಪಡುವರು" (1 ಪೇತ್ರ 3:16).

ಇನ್ನೊಂದು ವಿಧವೇನೆಂದರೆ ಮನಸ್ಸಾಕ್ಷಿಯು ತಪ್ಪಿನ ಕುರಿತು ಹಂಗಿಸುವುದಾದರೆ, ಜೀವಿತಕ್ಕೆ ಅದು ಅತಿ ದೊಡ್ಡದಾದ ಶಾಪವಾಗಿರುತ್ತದೆ. ಜ್ಞಾನೋಕ್ತಿ 28:1ಎ ರಲ್ಲಿ ಪಾಪ ಪ್ರಜ್ಞೆ ಇರುವವನಿಗೆ ಇರುವ ಶಿಕ್ಷೆಯ ಬಗ್ಗೆ ಜ್ಞಾನಿಯು ತಿಳಿಸಿರುವನು, "ಹಿಂದಟ್ಟದಿದ್ದರೂ ದುಷ್ಟನು ಹೆದರಿ ಓಡುವನು." ನಿಷ್ಕಪಟವಾದ ಮನಸ್ಸಾಕ್ಷಿಯು ಪರಲೋಕದ ಒಂದು ಸವಿ ಆಗಿದ್ದರೆ, ಪಾಪ ಪ್ರಜ್ಞೆಯು ನರಕದ ಮುನ್ನೋಟವಾಗಿರುತ್ತದೆ.[15]

ಇಬ್ರಿಯ ಬರಹಗಾರನು ಪಾಪ ಪ್ರಜ್ಞೆಯ ಬಗ್ಗೆ ಇರಬೇಕಾದ ಮನಸ್ಸಾಕ್ಷಿಯ ಬಗ್ಗೆ ಕುರಿತಾಗಿ ಮೋಶೆಯ ಧರ್ಮಶಾಸ್ತ್ರದಲ್ಲಿ ಇರುವ ಯಜ್ಞಗಳ ಕುರಿತು ಬರೆದಿರುವನು (ಇಬ್ರಿಯ 9:9, 14; 10:2). ಪಾಪ ಪ್ರಜ್ಞೆಯನ್ನು ಅವನು "ಅಪರಾಧದ ಕೆಟ್ಟ ಮನಸ್ಸು" ಎಂದು ಕರೆದಿರುವನು ಇಬ್ರಿಯ 10:22. ಕೆಲವು ಬರಹಗಾರರು "ಕೆಟ್ಟ ಮನಸಾಕ್ಷಿ ಎಂದರೆ" ಸರಿಯಾಗಿ ಕಾರ್ಯ ನಿರ್ವಹಿಸದ ಸಂಗತಿ ಎಂದಿರುವರು; ಅದು ಮನುಷ್ಯನನ್ನು ಅಪರಾಧಿ, ಅಪರಾಧಿ, ಅಪರಾಧಿ! ಎಂದು ಖಂಡಿಸುವಾಗ, ದೇವರ ಯೋಜನೆಯಂತೆ ಅದು ಕಾರ್ಯ ನಿರ್ವಹಿಸುತ್ತಿದೆ ಎಂಬುದು ನನ್ನ ಆಲೋಚನೆಯಾಗಿದೆ.

ಸ್ವಖಂಡನೆಯ ಬಗ್ಗೆ ಇತಿಹಾಸದಲ್ಲೂ ಸತ್ಯವೇದದಲ್ಲೂ ಹಾಗೂ ನಮ್ಮ ಸ್ವಂತ ಜೀವಿತದಲ್ಲೂ ಇರುವ ವೇದನೆಯ ಕಥೆಗಳು ಎಷ್ಟೋ ಹೆಚ್ಚಾಗಿರುತ್ತವೆ. ಸತ್ಯವೇದದಲ್ಲಿ ಇರುವ ಕಾಯಿನನ ನಿದರ್ಶನವನ್ನು ನೋಡುತ್ತೇವೆ (ಆದಿಕಾಂಡ 4:9), ಅರಸನಾದ ಸೌಲ (1 ಸಮುವೇಲ 26:21). ಹೆರೋದ ಅರಸನು (ಮಾರ್ಕ 6:16), ಮತ್ತು ಯೂದನು (ಮತ್ತಾಯ 27:3-5).

ಅಪಾರಾಧ ಮನೋಭಾವದವರಿಗೆ ಉಂಟಾದ ವೇದನೆಗಳ ಕುರಿತು ಚರಿತ್ರೆಯಲ್ಲಿ ಹಲವಾರು ನಿದರ್ಶನಗಳಿವೆ. ಒಂದು ಸಾರಿ, ಒಬ್ಬ ಕೊಲೊಗಾರನಾದ ನ್ಯಾಯಾಧಿಪತಿಯ ವಿಚಾರಣೆಗಾಗಿ ತನ್ನ ಆಸನದಲ್ಲಿ ಕುಳುತ್ತಿದ್ದನು. ವಿಚಾರಣೆಯ ಸಮಯದಲ್ಲಿ ಅವನು ಎದ್ದು ನಿಂತು ಅರಿಕೆ ಮಾಡಿದ್ದೇನೆಂದರೆ, ಒಂದು ವರ್ಷದ ಹಿಂದೆ ಅವನು ಒಬ್ಬ ಮನುಷ್ಯನನ್ನು ಕೊಂದು ಹಾಕಿದ್ದನು. ಅವನು ವಿಚಾರಣೆಯನ್ನು ತಪ್ಪಿಸಿಕೊಂಡು, ಒಂದು ಹೊಸ ಸಮುದಾಯದಲ್ಲಿ ನೆಲಸಿ, ಅಲ್ಲಿಯ ಜನರ ಪ್ರೀತಿಗೆ ಪಾತ್ರನಾದನು. ಅವನು ಅಲ್ಲಿ ಸ್ವಂತ ಆಸ್ತಿಯನ್ನು ಸಂಪಾದಿಸಿ, ಒಳ್ಳೆಯ ಹೆಸರನ್ನು ಗಳಿಸಿದ್ದನು, ನಂತರದಲ್ಲಿ ಅವನು ಅಲ್ಲಿಯೇ ಒಬ್ಬ ನ್ಯಾಯಾಧಿಪತಿಯ ಸ್ಥಾನಕ್ಕೆ ಆಯ್ಕೆ ಹೊಂದಿದನು. ಹೇಗೂ ಅವನು ಅಲ್ಲಿದ್ದ ಒಬ್ಬ ಕೊಲೆಗಾರನ ವಿಚಾರಣೆಯನ್ನು ಮಾಡುವಾಗ, ತನ್ನ ಮನಸ್ಸಾಕ್ಷಿಯಲ್ಲಿ ಎಚ್ಚರಗೊಂಡವನಾಗಿ, ತನ್ನಲ್ಲಿಯೇ, ಒಂದು ನಿರ್ಣಯವನ್ನು ಮಾಡಿದನು. ನಂತರ ತನ್ನ ಅಧಿಕಾರಿಗಳಿಗೆ, ತನ್ನನ್ನು ವಿಚಾರಣೆಗೆ ಒಳಪಡಿಸಬೇಕೆಂದು ಅವರಿಗೆ ಶರಣಾದನು.

ನಾವೆಲ್ಲರೂ ಸಹ ಅಪಾರಾಧ ಮನೋಭಾವದ ಮುಳ್ಳಿನಿಂದ ಚುಚ್ಚಲ್ಪಟ್ಟವರಾಗಿದ್ದೇವೆ, ಕೆಲ ಸಮಯದ ಹಿಂದೆ, ಕ್ರೈಸ್ತರ ಶಾಲೆಯಲ್ಲಿದ ಒಬ್ಬ ಶಿಕ್ಷಕನಿಗೆ ಒಂದು ಪತ್ರ ಬಂದಿತು:

> ನನ್ನ ಶಾಲ ಸಮಯದಲ್ಲಿ (ದಿನಾಂಕ) ನಾನು ನಿಮ್ಮ ವಿದ್ಯಾರ್ಥಿಯಾಗಿದ್ದೆನು. ನಾನು ನೀವು ಬೋಧಿಸುತ್ತಿದ್ದ ಹಳೇ ಒಡಂಬಡಿಕೆಯ ಚರಿತ್ರೆಯ ತರಗತಿಯಲ್ಲಿದ್ದೆನು. ಹಳೆ ಒಡಂಬಡಿಕೆಯನ್ನು ನಾವುಗಳು ಪೂರ್ಣವಾಗಿ ಓದಬೇಕೆಂಬ ಆದೇಶವನ್ನು ಹೊಂದಿದ್ದೆನು. ನಾನು ಪೂರ್ಣವಾಗಿ ಓದಿರುವೆನು ಎಂಬ ಸೂಚನೆಯನ್ನು ನೀಡಿದ್ದರು ನಾನು ಕೇವಲ 40ರಿಂದ ಶೇಕಡ 60ರಷ್ಟು ಮಾತ್ರ ಓದಿದ್ದೆನು. ಆದರೆ ನಾನು ಪೂರ್ಣ ಓದಿರುವೆನೆಂಬ ಉತ್ತರವನ್ನು ನಿಮಗೆ ನೀಡಿದ್ದನು. ಅಂದಿನಿಂದ ಅದು ನನ್ನ ಮನಸ್ಸಿನಲ್ಲಿ ಕೊರೆಯುತ್ತಿತ್ತು, ನಾನು ಇದರ ಕುರಿತು ಸುಳ್ಳು ಹೇಳಿದ್ದೆನು!

ಆದ್ದರಿಂದ ಈ ವಿಚಾರವನ್ನು ನಿಮ್ಮ ಮುಂದೆ ಅರಿಕೆ ಮಾಡಿ ಒಪ್ಪಿಕೊಳ್ಳುತ್ತಿರುವೆನು. ನನ್ನ ಅಂಕಗಳನ್ನು ಕಡಿಮೆ ಮಾಡುವ ಅಗತ್ಯವಿದ್ದರೆ ನನ್ನನ್ನು ಸಂಪರ್ಕಿಸಿರಿ (ಶಾಲೆ ವಿಳಾಸ) ಈ ನನ್ನ ನಾಚಿಕೆಕರವಾದ ಅಪರಾಧಕ್ಕಾಗಿ ನನ್ನನ್ನು ಕ್ಷಮಿಸಿರಿ. ಮಾನಸಾಂತರ ಪಟ್ಟು ಕರ್ತನಲ್ಲಿ ಕ್ಷಮೆಯಾಚಿಸಿದ್ದರೂ, ಇದನ್ನು ನಿಮ್ಮ ಮುಂದೆ ಅರಿಕೆ ಮಾಡುವವರೆಗೆ ನನಗೆ ವಿಶ್ರಾಂತಿ ಇರುವದಿಲ್ಲ.

ನನ್ನನ್ನು ಕ್ಷಮಿಸಿರುವ ಕುರಿತು ತಕ್ಷಣವೇ ತಿಳಿಸರಿ, ನಿಮ್ಮ ಸಮಯಕ್ಕಾಗಿ ವಂದನೆ.

ಮನಸ್ಸಾಕ್ಷಿಯ ಮಾರ್ಗದರ್ಶನಕ್ಕೆ ಒಳಗಾಗದೆ ಹೋದರೆ, ಅದರ ಪರಿಣಾಮವು ಯಾತನಾಮಯವಾಗಿರುತ್ತದೆ. ಆದ್ದರಿಂದ ಮನಸ್ಸಾಕ್ಷಿಯನ್ನು ಉಲ್ಲಂಘಿಸಬೇಡಿರಿ ಎಂದು ಸತ್ಯವೇದವು ಒತ್ತಿ ಹೇಳುತ್ತದೆ (ರೋಮಾಪುರ 14:23;[16] ಅಪೊಸ್ತಲರ ಕೃತ್ಯಗಳು 24:16). ಮನಸ್ಸಾಕ್ಷಿಗೆ ಒಳಗಾಗದೆ ಹೋದರೆ, ದೇವರ ಯೋಜಿತವಾದ ಕಾರ್ಯಗಳಿಗೆ ಹಿನ್ನಡೆ ಉಂಟಾಗುತ್ತದೆ (1 ತಿಮೊಥೆ 4:2).[17]

**ಅದು ಎಚ್ಚರಿಸುತ್ತದೆ ಅಥವಾ ಇತರರನ್ನು ಖಂಡಿಸುತ್ತದೆ**

ಇತರರನ್ನು ಎಚ್ಚರಿಸುವ ಹಾಗೂ ಖಂಡಿಸುವ ವಿಧಾನವು ಮನಸ್ಸಾಕ್ಷಿಯ ಎರಡನೆಯ ಕೆಲಸವಾಗಿರುತ್ತದೆ. ಸ್ವ - ತೀರ್ಪು ಮಾಡಿಕೊಳ್ಳುವದಲ್ಲದೆ, *ಇತರರಿಗೂ* ತೀರ್ಪು ನೀಡುತ್ತದೆ. ಪೌಲನು ಇದನ್ನು ಅರಿತವನಾದಾಗ, ತನ್ನ ಓದುಗರೆಲ್ಲರೂ, ಪೌಲನು ಒಳ್ಳೆಯ ಮನ ಸ್ಸಾಕ್ಷಿಯುಳ್ಳವನಾಗಿದ್ದನು ಎಂದು ಅರಿಯಬೇಕೆಂದು ತಿಳಿಸಿದನು. ಉದಾಹರಣೆ 2 ಕೊರಿಂಥ 4:2ರಲ್ಲಿ ಅವನಿಗೆ ತೋರಲ್ಪಟ್ಟ ಸತ್ಯದ ಪ್ರಕಾರ ಮುಂದುವರೆದಿದ್ದನು. "ಕರ್ತನ ಭಯವು ನಮಗಿರುವದರಿಂದ ನಾವು ಮನುಷ್ಯರನ್ನು ಒಡಂಬಡಿಸುತ್ತೇವೆ. ನಾವು ಯಥಾರ್ಥರೆಂಬುದು ದೇವರಿಗೆ ಗೊತ್ತುಂಟು, ನಿಮ್ಮ ಮನಸ್ಸಿಗೆ ಕೂಡ ಗೊತ್ತಾಗಿದೆ ಎಂದು ನಂಬಿಕೊಂಡಿದ್ದೇನೆ" ಅಂದನು (5:11).

ಮನಸ್ಸಾಕ್ಷಿಯು ಇತರರನ್ನು ಎಚ್ಚರಿಸುವ ಮತ್ತು ಖಂಡಿಸುವ ಸಾಮರ್ಥ್ಯವನ್ನು ಹೊಂದಿರುವದರಿಂದ, ಈ ವಿಧವಾದ ಮನಸ್ಸಾಕ್ಷಿಯ ಅಭ್ಯಾಸವು ಇತರರ ಸಂಬಂಧದಲ್ಲಿ ಪರಿಣಾಮ ಬೀರುತ್ತದೆ. ಆದ್ದರಿಂದ ಮನಸ್ಸಾಕ್ಷಿಯ ವ್ಯವಹಾರವು ಸಂಬಂಧಗಳಿಗೆ ಸಂಪರ್ಕ ಹೊಂದಿರುವದರಿಂದ, ಅದರಲ್ಲೂ ಕ್ರೈಸ್ತರ ಅನ್ಯೋನ್ಯತೆಗೆ ಸಂಬಂಧ ಪಡುವದರಿಂದ ತರ್ಕಕ್ಕೆ ಯೋಗ್ಯವಾಗಿದೆ (ರೋಮಾಪುರ 14; 15; 1 ಕೊರಿಂಥ 8-10).[18]

## ಮುಕ್ತಾಯ

ನಾನು ವಿವರಿಸುವಂತೆ ಅಥವಾ ಅದರ ಕಾರ್ಯದ ಬಗ್ಗೆ ತಿಳಿಸಿರುವಂತೆ, ನೀವುಗಳು ಅರಿತಿರಬಹುದು ಅಥವಾ ಅರಿಯದೆ ಇರಲೂ ಬಹುದು, ಆದರೆ ಈ ಮುಂದಿನ ಹೇಳಿಕೆಗಳು ಸತ್ಯವಾದವುಗಳಾಗಿವೆ: ಮನಸ್ಸಾಕ್ಷಿಯ ವಿಚಾರಗಳು ಸತ್ಯವಾದವುಗಳಾಗಿವೆ; ಅದು ಯಾವುದು ಸತ್ಯ ಅಥವಾ ಯಾವುದು ತಪ್ಪು ಎಂದು ಮನವರಿಕೆ ಮಾಡುತ್ತದೆ; ಮನಸ್ಸಾಕ್ಷಿಗೆ ವಿರುದ್ಧವಾಗಿ ಜೀವಿಸುವದು ಬಹಳ ಅಪಾಯಕಾರಿಯಾದ ಸಂಗತಿಯಾಗಿದೆ. ಈ ಸತ್ಯಗಳನ್ನು ಮನುಷ್ಯರ ಹೃದಯಗಳಲ್ಲಿ ಆಳವಾಗಿ ಬರೆಯಲಾಗಿದೆ.

ನಾನು ಸರಿಯಾಗಿ ಜೀವಿಸುವದಕ್ಕೆ ಅರ್ಹನಾಗಿರಬೇಕು.
ದಿನಗಳು ಕಳೆದಂತೆ ನಾನು ಸಾಮರ್ಥ್ಯ ಹೊಂದಬೇಕು.
ನಿರರ್ಗಳನಾಗಿ ನನ್ನನ್ನು ನಾನೇ ನೋಡಿಕೊಳ್ಳಬೇಕು.
ಸೂರ್ಯಾಸ್ತದಲ್ಲಿ ಕುಳಿತು, ನಾನು ಮಾಡಿದ ಸಂಗತಿಗಳನ್ನು ಅನ್ವೇಷಿಸಬೇಕು.

ನನ್ನನ್ನು ನನ್ನಿಂದ ಮುಚ್ಚಿಟ್ಟುಕೊಳ್ಳಲು ಸಾಧ್ಯವಿಲ್ಲ.
ಇತರರು ನೋಡದೆ ಇರುವದನ್ನು ನಾನು ನೋಡಬೇಕು.
ಇತರರು ಏನನ್ನು ಕಾಣಲಾರರು ಎಂದು ನಾನು ಅರಿತಿರುವೆನು,
ನಾನು, ನನಗೆ ಮೋಸಪಡಿಸಿಕೊಳ್ಳಲು ಸಾಧ್ಯವಿಲ್ಲ.
ಏನೇ ಆದರೂ, ನಾನು ನನ್ನನ್ನು ಗೌರವಿಸಿ
ಶುದ್ಧ ಮನಸ್ಸುಳ್ಳವನಾಗಿರಬೇಕು.[19]

ಅಂತಿಮವಾಗಿ, ನಾವು ಇದನ್ನು ಮುಗಿಸುವ ಹಾಗೆ ಒಂದು ಪ್ರಶ್ನೆಯನ್ನು ಕೇಳಿಕೊಳ್ಳೋಣ. ಒಬ್ಬನು ತನ್ನ ಮನಸ್ಸಾಕ್ಷಿಯನ್ನು ಉಲ್ಲಂಘಿಸಿದ ನಂತರ, ಆ ಪಾಪ ಪ್ರಜ್ಞೆಯು ಅವನನ್ನು ತಿನ್ನುವಾಗ, ಅವನು ಏನು ಮಾಡಲು ಸಾಧ್ಯ?

ಕೆಲವು ಮಾನಸಿಕ ಶಾಲೆಗಳು, ನೀವು ನಿಜವಾಗಲೂ ಅಪರಾಧಿ ಮನೋಭಾವದವರಲ್ಲ, ಆದ್ದರಿಂದ, ಅಪರಾಧಿ ಮನೋಭಾವದ ಕುರಿತು ಚಿಂತಿಸದಿರಿ, ಅದನ್ನು ಮನಸ್ಸಿನಿಂದ ತೆಗೆದುಬಿಡಿರಿ, ಅದನ್ನು ನಿಮ್ಮ ಬೆನ್ನ ಹಿಂದೆ ಹಾಕಿರಿ. ಪಾಪ ಪ್ರಜ್ಞೆ ಹೊಂದಿದವರಿಗೆ ಇದು ಅನ್ವಯಿಸುವದಿಲ್ಲ. ಮಾನುಷಿಕ ತತ್ವದ ಪ್ರಕಾರ ನಿನ್ನಲ್ಲಿರುವ ಒಳ್ಳೆಯದು ಕೆಟ್ಟದ್ದನ್ನು ಜಯಿಸುತ್ತದೆ, ಆದ್ದರಿಂದ ಒಳ್ಳೆಯದನ್ನು ಮಾಡಲು ಪ್ರಯತ್ನಿಸಿರಿ, ಹಿಂದಿನ ಅಪರಾಧ ಮನೋಭಾವದ ಕುರಿತು ಚಿಂತಿಸದಿರಿ. ಹಾಗೂ ಮನುಷ್ಯನು ತನ್ನ ಅಂತರಾಳದಲ್ಲಿ ಅಪರಾಧ ಮನೋಭಾವದವನಾಗಿರುವನು.

ಆದರೆ ಸತ್ಯವೇದದ ಪ್ರಕಾರ ಅಪರಾಧ ಮನೋಭಾವದ ಕುರಿತು ಯೋಚಿಸಿ, ಅದನ್ನು ಪರಿಹರಿಸುವ ನಿಟ್ಟಿನಲ್ಲಿ ಸಾಗಬೇಕು. ಅದನ್ನು ಯೇಸುವಿನ ರಕ್ತದ ಮೂಲಕ ದೂರ ಮಾಡಲು ಸಾಧ್ಯವಿದೆ! ಪ್ರೇರಿತರಾದ ಬರಹಗಾರರು ಹೇಳಿದ ಹಾಗೆ, ಕ್ರಿಸ್ತನ ರಕ್ತವು ಎಷ್ಟೋ ಹೆಚ್ಚಾಗಿ ನಮ್ಮನ್ನು ನಿರ್ಜೀವ ಕರ್ಮಗಳಿಂದ ಬಿಡಿಸಿ ಜೀವವುಳ್ಳ ದೇವರನ್ನು ಆರಾಧಿಸುವವರಾಗುವಂತೆ ನಮ್ಮ ಮನಸ್ಸನ್ನು ಶುದ್ಧೀಕರಿಸುವದಲ್ಲವೇ? (ಇಬ್ರಿಯ 9:14). ನಮ್ಮ ಜೀವಿತವನ್ನು ಆತನಿಗೆ ವಹಿಸಿ ಕೊಡುವಾಗ, ನಮ್ಮ ಮನಸ್ಸಾಕ್ಷಿಯು ಶುದ್ಧಗೊಳ್ಳುತ್ತದೆ. "ದೇಹವನ್ನು ತಿಳಿನೀರಿನಿಂದ ತೊಳೆದುಕೊಂಡು ಪರಿಪೂರ್ಣವಾದ ನಂಬಿಕೆವುಳ್ಳವರಾಗಿಯೂ ದೇವರ ಬಳಿಗೆ ಬರೋಣ" (ಇಬ್ರಿಯ 10:22ಬಿ). ದೇಹವನ್ನು ತಿಳಿನೀರಿನಿಂದ ತೊಳೆಯುವದು ಅಂದರೆ, "ಅದು ದೀಕ್ಷಾಸ್ನಾನ" ಎಂದು ಅನೇಕ ಪಂಡಿತರುಗಳು ಒಪ್ಪಿಕೊಂಡಿರುತ್ತಾರೆ. ದೀಕ್ಷಾಸ್ನಾನದ ವಿಧೇಯತೆಯನ್ನು ಮನಸ್ಸಾಕ್ಷಿಯ ಶುದ್ಧತೆಯನ್ನು ಒಂದಾಗಿಸುವಾಗ ಪೇತ್ರನು "ಒಳ್ಳೆ ಮನಸ್ಸಾಕ್ಷಿ ಬೇಕೆಂದು ದೇವರಿಗೆ" ವಿಜ್ಞಾಪಿಸಿಕೊಳ್ಳುವಂಥದ್ದೇ ಎಂದು ಹೇಳಿರುವನು (1 ಪೇತ್ರ 3:21ಸಿ).

ನೀವು ಶುದ್ಧ ಮನಸ್ಸಿನಿಂದ ದೊರಕುವ ಆಶೀರ್ವಾದವನ್ನು ತಿಳಿಯಬೇಕಾದರೆ, ಸರಿಯಾದದ್ದನ್ನೇ ಮಾಡಿ, ಈ ದಿನವೇ ದೇವರಿಗೆ ವಿಧೇಯನಾಗು!

---

ಟಿಪ್ಪಣಿಗಳು

[1]ಸದ್ದುಕಾಯರು ಮತ್ತು ಫರಿಸಾಯರು ಈ ಮನೋಭಾವನೆ ಹೊಂದಿದ್ದರಿಂದ ಹೊರಟು ಹೋದರು. [2]ಹಳೇ ಒಡಂಬಡಿಕೆಯಲ್ಲಿ "ಮನಸ್ಸಾಕ್ಷಿ" ಎಂಬ ಪದವಿರಲಿಲ್ಲ (KJV) NASB ಯಲ್ಲಿ ಒಂದು ಬಾರಿ ಇರುತ್ತದೆ. [3]ಹೊಸ ಒಡಂಬಡಿಕೆಯಲ್ಲಿ ನಾಮ ಪದದಲ್ಲಿ ಮೂವತ್ತ - ಎರಡು ಬಾರಿ, ಕ್ರಿಯಾಪದದಲ್ಲಿ ಮೂರು ಸಾರಿ ಇರುತ್ತದೆ. [4]ಮುಂದಿನ ಪಾಠದಲ್ಲಿ ವಿವರಣೆ ನೀಡಲಾಗಿದೆ. [5]*Warren-Flew Debate* (Jonesboro, Ark.: National Christian Press, 1977). [6]"ಮನಸ್ಸಾಕ್ಷಿಯನ್ನು" ಮೌನ ಪಡಿಸಬಹುದು ಎಂಬ ಪಾಠದಲ್ಲಿ ಮುಂದುವರಿಸಲಾಗಿದೆ. ಅದು ಮಾನವನಲ್ಲಿ ಅಡಕವಾಗಿರುತ್ತದೆ. [7]Finn was a literary creation of Mark Twain (Samuel L. Clemens)

(1835-1910). [8]"ಮನಸ್ಸಾಕ್ಷಿ" ಅಂದರೆ ಜೀವದೊಂದಿಗೆ ಅರಿಯುವದರ "ನಮ್ಮಲ್ಲಿರುವ ದೇವರ ಸ್ವರ" ಮನಸ್ಸಾಕ್ಷಿಯೇ ದೇವರ ಸ್ವರವಲ್ಲ. [9]Walter Bauer, *A Greek-English Lexicon of the New Testament and Other Early Christian Literature,* rev. William F. Arndt and F. Wilbur Gingrich (Chicago: University of Chicago Press, 1957), 794. [10]Joseph H. Thayer, *Greek-English Lexicon of the New Testament* (Grand Rapids, Mich.: Zondervan Publishing House, 1962), 602.

[11]W. E. Vine, *The Expanded Vine's Expository Dictionary of New Testament Words*, ed. John R. Kohlenberger III, with James A. Swanson (Minneapolis, Minn.: Bethany House Publishers, 1984), 220. [12]ಮನುಷ್ಯನು ತನ್ನ ಮನಸ್ಸಿಗೆ ಅನುಗುಣವಾಗಿ ಜೀವಿಸುವನು ಎಂಬ ಅಪಾರ್ಥವಾಗಿದೆ. ಆದರೆ ಪೌಲನು ಹೇಳಿದಂತೆ ರೋಮಾಪುರ 3:23. [13]ಒಳ್ಳೆಯ ಎಂಬ ಎರಡು ಒಳ್ಳೆಯ ಗ್ರೀಕ್ ಪದಗಳು "ಒಳ್ಳೆಯ ಮನಸ್ಸಾಕ್ಷಿ" "ಅಗತಾಸ್" ಇಬ್ರಿಯ 13ರಲ್ಲಿ ಕಲೇಸ್. ಇದು ಮನಸ್ಸಾಕ್ಷಿಗೆ ಸಂಬಂಧಪಟ್ಟದ್ದು. [14]"ಸ್ಪಷ್ಟ" ಎಂಬ ಗ್ರೀಕ್ ಪದದ ಅರ್ಥ "ಶುದ್ಧವಾದ" (KJV) ಅಥವಾ "ತೊಳೆಯಲ್ಪಟ್ಟ." [15](ಮಾರ್ಕ 9:44, 46, 48) ಯೇಸು ಹೇಳಿದ ನರಕದ ದೃಷ್ಯ ಮನಸ್ಸಾಕ್ಷಿಗೆ "ಯಾಯದ ಹೊಳೆ ಎಂಬದೆ. [16]ವಚನಗಳ ಬಗ್ಗೆ ತಿಳಿದುಕೊಳ್ಳಲು ಮುಂದಿನ ಪಾಠ ನೋಡಿರಿ. [17]ಹೆಚ್ಚಿನ ವಿವರಣೆಗಳನ್ನು ತಿಳಿಯಲು ಮುಂದಿನ ಪಾಠ ನೋಡಿರಿ. [18]ಉದಾಹರಣೆಗೆ ಕೆಲವು ಅಧ್ಯಾಯನದ ವಿವರಗಳ ಬಗ್ಗೆ ಮುಂದಿನ ಪಾಠದಲ್ಲಿ ತಿಳಿಸಿದ್ದಾರೆ. [19]ಮೊದಲನೆಯ ವಚನ ಮತ್ತು ಕೊನೆಯ ವಚನಗಳನ್ನು "ವೈಯಕ್ತಿಕ" ಎಂಬುದಾಗಿ ಫ್ರೊಯನ್ (1947)ರಲ್ಲಿ ಕರೆಯಲಾಗಿದೆ.